ಓ ಎಸ್ ನಂಃ 416-20
ಪಿ ಡಬ್ಲ್ಯೂ ಃ 1

**ದಿಃ 30-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಬಿ ಟಿ ಐ ವಕೀಲರಿಂದ**

22. ಸದರಿ ದಾವೆಯನ್ನು ಹೂಡುವ ಸಮಯದಲ್ಲಿ ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ.

23. ನನ್ನ ತಾತನಿಗೆ ಇನಾಂ ಡಿ ಸಿ ಯವರ ಆದೇಶದ ಮುಖಾಂತರ ಸರ್ವೆ ನಂ 161 ರಿಂದ 164 ರವರೆಗೂ ಬಂದಿರುವ ದಾಖಲಾತಿಗಳನ್ನು ನಾನು ನೋಡಿರುತ್ತೇನೆ. ಸದರಿ ಆದೇಶದ ಪ್ರತಿ ನನ್ನ ಹತ್ತಿರ ಇರುತ್ತದೆ ನಾನು ಸದರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನಗೆ ನ್ಯಾಯಾಲಯದ ದಾಖಲಾತಿಗಳನ್ನು ನೋಡಿ ಹೇಳಲು ಆಗುವುದಿಲ್ಲ ನಾನು ಓದಿರುವುದಿಲ್ಲ ಆದ್ದರಿಂದ ನಾನು ಸದರಿ ಆದೇಶವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆಯೋ ಇಲ್ಲವೋ ಗೊತ್ತಿಲ್ಲ. ನನ್ನ ಹತ್ತಿರ ಸದರಿ ಆದೇಶದ ಪ್ರತಿ ಇತ್ತು. ನಾನು ಉದ್ದೇಶಪೂರ್ವಕವಾಗಿ ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಓದಿರುವುದಿಲ್ಲ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

24. ಇನಾಂ ಡಿ ಸಿ ಆದೇಶ ಮುಖಾಂತರ ಸದರಿ ಆಸ್ತಿಗಳು ನಮ್ಮ ಕುಟುಂಬಕ್ಕೆ ಬಂದಿರುತ್ತದೆಯೇ ಅಥವಾ ಮೊದಲಿನಿಂದ ಸದರಿ ಆಸ್ತಿ ನಮ್ಮ ಕುಟುಂಬದಲ್ಲಿ ಇತ್ತೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ.

25. ಸಾಕ್ಷಿಗೆ ನಿಪಿ 24 ನ್ನು ತೋರಿಸಿ ಯಾವ ದಾಖಲಾತಿ ಎಂದು ಕೇಳಿದರೆ ಸಾಕ್ಷಿ ನಾನು ಓದಿಲ್ಲ ಆದ್ದರಿಂದ ನನಗೆ ಸದರಿ ದಾಖಲಾತಿಯ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯನ್ನು ನನಗೆ ಭಾಗ ಸರಿಯಾಗಿ ಕೊಡಬೇಕೆಂದು ನಾನು ನ್ಯಾಯಾಲಯಕ್ಕೆ ಹಾಕಿರುತ್ತೇನೆ. ನಿಪಿ 24 ನ್ನು ನಾನು ಯಾರ ಕಡೆಯು ಓದಿಸಿ ಅದರಲ್ಲಿ ಏನು ಇರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಿಪಿ 24 ಮುನಿಯಪ್ಪ ಮತ್ತು ಅವರ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡಿರುವ ಪತ್ರ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮುನಿಯಪ್ಪರವರ ಆರು ಜನ ಅಣ್ಣತಮ್ಮಂದಿರು ವಿಭಾಗ ಮಾಡಿಕೊಂಡಿರುವ ಪತ್ರವಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತುಗಳ ವಿಸ್ತೀರ್ಣವನ್ನು ನಿಪಿ 24 ರ ಪ್ರಕಾರ ತೋರಿಸಿರುತ್ತೇನೆ. ನಿಪಿ 24 ರ ವಿಭಾಗ ಪತ್ರದಲ್ಲಿ ನನ್ನ ಮಾವ ಮುನಿಯಪ್ಪರವರಿಗೆ ದಾವಾ ಐಟಂ ನಂ 1 ರಿಂದ 4 ಸ್ವತ್ತುಗಳಲ್ಲಿ 6 ಎಕರೆ 39 ಗುಂಟೆ ಜಮೀನಿನಲ್ಲಿ 1/3 ಭಾಗ ಇರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು

ಚಕ್ಕುಬಂದಿಯನ್ನು ಯಾವ ಆಧಾರದ ಮೇಲೆ ಕೊಟ್ಟಿರುತ್ತೇನೆ ಎಂದರೆ ಗೊತ್ತಿಲ್ಲ. ನಿಪಿ 24ರ ವಿಭಾಗ ಪತ್ರದ ಪ್ರಕಾರ ಮುನಿಯಪ್ಪರವರಿಗೆ 1/3 ಭಾಗವನ್ನು ಪಡೆದುಕೊಂಡಿರುವುದಿಲ್ಲ ಮತ್ತು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮಾವ ಮುನಿಯಪ್ಪರವರಿಗೆ 2 ಎಕರೆ 13 ಗುಂಟೆ ನಿಪಿ 24ರಲ್ಲಿ ಬಂದಿರುತ್ತದೆ ಇನ್ನುಳಿದ 1 ಎಕರೆ 31 ಗುಂಟೆ ನಾನು ಹೆಚ್ಚಿಗೆ ತೋರಿಸಿ ದಾವೆಯನ್ನು ಹೂಡಿರುತ್ತೇನೆ ಅದು ಎಲ್ಲಿಂದ ಬಂದಿರುತ್ತದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

26. ಸರ್ವೆ ನಂ 161 ರಿಂದ 164 ಜಮೀನಿನ ಚಕ್ಕುಬಂದಿ ಎಲ್ಲಿ ಹೇಗೆ ಬರುತ್ತದೆ ಎಂದರೆ ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ 1 ರಿಂದ 4 ರ ಸ್ವತ್ತುಗಳಿಗೆ ನೀಡಿರುವ ಚಕ್ಕುಬಂದಿಗಳನ್ನು ನಾವೇ ದಾವಾ ಸ್ವತ್ತುಗಳ ಹತ್ತಿರ ಹೋಗಿ ಯಾರ ಹತ್ತಿರನೋ ಬರೆಸಿಕೊಂಡು ಬಂದಿರುತ್ತೇವೆ. ಕೆಂಗೇರಿ ಮತ್ತು ತಾವರೆಕೆರೆ ರಸ್ತೆ ನಮ್ಮ ಜಮೀನಿನ ಯಾವ ದಿಕ್ಕಿಗೆ ಇರುತ್ತದೆ ಎಂದು ನನಗೆ ಗೊತ್ತಾಗುವುದಿಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**